INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -3, May-June, 2023,
PageNo,76- 85
Peer -Reviewed, Refereed Journal

# ಮೈಸೂರು ದೊಡ್ಡಕೆರೆ ಮೈದಾನದ ವಸ್ತುಪ್ರದರ್ಶನದ ಒಳಭಾಗದಲ್ಲಿರುವ ಪ್ರಾಚೀನ ಶ್ರೀವೀರ ಆಂಜನೇಯಸ್ವಾಮಿ ದೇವಾಲಯ : ಐತಿಹಾಸಿಕ ವಿವರಣೆ

ಡಾ.ಶಲ್ವಪ್ಪಿಳ್ಳೈ ಅಯ್ಯಂಗಾರ್[1]

**ಮುಖ್ಯಾಂಶ ಸಾರ** : ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿಒಂದು ವೀರಾಂಜನೇಯ ಸ್ವಾಮಿದೇವಾಲಯವನ್ನು ವೀಣಾ ವೆಂಕಟಸುಬ್ಬಯ್ಯನವರ ಪತ್ನಿಯಾದ ವೆಂಕಮ್ಮನವರು 11.05.1840ರಲ್ಲಿ ನಿರ್ಮಿಸಿದ್ದು, ಇದು ಶಾಸನೋಕ್ತ ದೇವಾಲಯವಾಗಿದೆ. ಈ ಶಾಸನವು ಅಪ್ರಕಟಿತವಾಗಿದ್ದು, ಒಂದು ಕಾಲದಲ್ಲಿ ಜೀವಂತವಾಗಿದ್ದ ದೇವರಾಜಸಮುದ್ರ ಎಂಬ ದೊಡ್ಡಕೆರೆಯ ಏರಿಯ ಭಾಗದಲ್ಲಿ ಈ ದೇವಾಲಯವನ್ನು ಅಂದಿನ ಸಂಧ್ಯಾಕಾರ್ಯಗಳು, ದೇವತಾಕಾರ್ಯಗಳ ಅಗತ್ಯಕ್ಕಾಗಿ, ಮತ್ತು ವೀಣಾ ವೆಂಕಟಸುಬ್ಬಯ್ಯ ಮತ್ತು ವೆಂಕಮ್ಮ ದಂಪತಿಗಳಿಗೆ ಶಾಶ್ವತವಾಗಿ ವಿಷ್ಣುಲೋಕ ಸಿದ್ಧಿಸಲಿ ಎಂಬ ಆಶಯದಿಂದ ಈ ದೇವಾಲಯ ನಿರ್ಮಿತವಾಗಿತ್ತು. ಈಗ ಕೆರೆಯೂ ಇಲ್ಲದೆ, ಈ ಭಾಗವು ಸ್ವಲ್ಪ ಪಾಳು ಬಿದ್ದಂತೆಆಗಿತ್ತು. ಆದ್ದರಿಂದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಮಿರ್ಲೆ ಶ್ರೀನಿವಾಸಗೌಡರು ಈ ದೇವಾಲಯದ ಜೀರ್ಣೋದ್ಧಾರಕ್ಕೆ ಪ್ರಯತ್ನಿಸಿದ್ದು, ಆಗಮೋಕ್ತ ಸಲಹೆಗಳನ್ನು ಡಾ.ಶಲ್ವಪ್ಪಿಳ್ಳೈಅಯ್ಯಂಗಾರ್ ಅವರಿಂದ ಪಡೆದುಕೊಂಡು ಪುನರುಜ್ಜೀವನಗೊಳಿಸಲಾಗಿದೆ. ಈ ದೇವಾಲಯ, ಶಿಲ್ಪ, ಇದರ ಇತಿಹಾಸದ ಬಗ್ಗೆ ಈ ಲೇಖನವು ವಿವರವಾಗಿ ಚರ್ಚಿಸುತ್ತದೆ.

**ಮುಖ್ಯಪದಗಳು :ವೀರಾಂಜನೇಯ– ಮುಮ್ಮಡಿಕೃಷ್ಣರಾಜ ಒಡೆಯರ್– ವೀಣಾಭಕ್ಷಿ– ವೆಂಕಮ್ಮ– ವೀಣಾ ವೆಂಕಟಸುಬ್ಬಯ್ಯ – ದೊಡ್ಡಕೆರೆ**

[1].ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570006

ಮೈಸೂರು ಸಾಂಸ್ಕೃತಿಕ ರಾಜಧಾನಿ ಮತ್ತು ಪಾರಂಪರಿಕ ನಗರ.ಇಲ್ಲಿ ಯಾವುದೇ ಮೂಲೆಯಲ್ಲಿ ನೋಡಿದರೂ ಇತಿಹಾಸದ ಭಾಗವೊಂದು ತೆರೆದುಕೊಳ್ಳುತ್ತದೆ. ಇಲ್ಲಿನ ಒಡಲಿನಲ್ಲಿ ಇತಿಹಾಸದ ಅದೆಷ್ಟೋ ವಿಷಯಗಳು ಅವಿತುಕೊಂಡಿದೆ. ಈ ಒಡಲಿನ ಆಳಕ್ಕೆ ಹೋಗಿ ಅಧ್ಯಯನ ಮಾಡಿದಾಗ ರೋಚಕವಾದ ಹೊಸ ಹೊಸ ವಿಷಯಗಳು ನಮಗೆ ಅನುಭವಕ್ಕೆ ಬರುತ್ತದೆ. ಅಂತಹುದೆ ಒಂದು ದೇವಾಲಯ ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿದ್ದು, ಅದೆಷ್ಟೋ ಜನರಿಗೆ ಮರೆತು ಹೋಗಿರುವ ವಿಷಯವನ್ನು ಈ ಲೇಖನದಲ್ಲಿ ಮತ್ತೆ ತೆರೆದಿಡುವ ಪ್ರಯತ್ನ ಮಾಡಲಾಗಿದೆ.

ನನ್ನ ಆತ್ಮೀಯರಾದ ಮೈಸೂರು ದಸರಾ ವಸ್ತುಪ್ರದರ್ಶನದ ನಿರೂಪಕರಾದ ಶ್ರೀ ಆರ್.ಅಜಯ್‌ಕುಮಾರ್‌ಶಾಸ್ತ್ರಿ ನಿನ್ನೆ ನನಗೆ ದೂರವಾಣಿ ಕರೆಯನ್ನು ಮಾಡಿ, ವಸ್ತುಪ್ರದರ್ಶನದ ಆವರಣದಲ್ಲಿ ಒಂದು ಅಭಯಆಂಜನೇಯ ಮತ್ತು ಸಾಂಬಸದಾಶಿವ ದೇವಾಲಯವಿದ್ದು ಅದನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಮಿರ್ಲೆ ಶ್ರೀನಿವಾಸ ಗೌಡರು ಪುನರ್ ಜೀರ್ಣೋದ್ಧಾರ ಮಾಡುತ್ತಿದ್ದಾರೆ. ತಮ್ಮ ಆಗಮೋಕ್ತ ಮತ್ತು ಇತಿಹಾಸದ ಸಲಹೆಗಳಿಗಾಗಿ ಅಲ್ಲಿಗೆ ಹೋಗೋಣ ಎಂದರು. ಅದರಂತೆದಿನಾಂಕ 28.11.2022ರ ಸೋಮವಾರ ಮಧ್ಯಾಹ್ನ ನಾನು ನನ್ನ ಆತ್ಮೀಯರಾದ ವಿಭಾಗದ ಶ್ರೀಮುನಿಸ್ವಾಮಿ, ಇತಿಹಾಸಜ್ಞರಾದ ಡಾ.ಕಾಳಸ್ವಾಮಿ.ಹೆಚ್.ಎನ್. ಮತ್ತು ಶ್ರೀ ಆರ್.ಅಜಯ್‌ಕುಮಾರ್‌ಶಾಸ್ತ್ರಿ ಇವರೊಡನೆ ಈ ದೇವಾಲಯಕ್ಕೆ ಭೇಟಿ ನೀಡಿದೆ.ಅಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಮಿರ್ಲೆ ಶ್ರೀನಿವಾಸಗೌಡ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಕೆ.ರುದ್ರೇಶ್, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರೂ (ಪ್ರ) ನನ್ನ ಆತ್ಮೀಯರಾದ ಡಾ.ಸಿ.ಎನ್. ಮಂಜುಳಾ ಮುಂತಾದ ಎಲ್ಲರೂ ಪರಿಶೀಲನೆ ನಡೆಸಿ, ಈ ಐತಿಹಾಸಿಕ ಪ್ರದೇಶದ ಉಳಿವಿಗಾಗಿ ಚರ್ಚಿಸಿದೆವು. ಮತ್ತು ಶ್ರೀಮಿರ್ಲೇ ಶ್ರೀನಿವಾಸಗೌಡರು ಇತಿಹಾಸ ಮತ್ತು ಪರಂಪರೆಯನ್ನು ಉಳಿಸುತ್ತಿರುವ ವಿಷಯದ ಬಗ್ಗೆ ಅವರನ್ನು ಅಭಿನಂದಿಸಿದೆವು.

ಈ ದೇವಾಲಯವು ವಸ್ತುಪ್ರದರ್ಶನ ಪ್ರಾಧಿಕಾರ ಆವರಣದ ಒಳಗೆ ಇದ್ದು, ಈಗ ಇರುವ ಕರ್ನಾಟಕ ಸರ್ಕಾರದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಬಲಭಾಗದಲ್ಲಿ ಇದೆ. ಈ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಒಂದು ಕಬ್ಬಿಣದ ಆರ್ಚ್ ಅಥವಾ ಕಮಾನು ಇದ್ದು ಅದರಲ್ಲಿ ಸಾಂಬಶಿವ ಮತ್ತು ಅಭಯಾಂಜನೇಯ ದೇವಾಲಯ ಎಂದು ಬರೆಯಲಾಗಿದೆ. ಈ ಕಮಾನಿನ ದಾರಿಯಲ್ಲಿ ಒಂದು ಐವತ್ತು ಹೆಜ್ಜೆ ನಡೆದರೆ ನಮಗೆ ಹಲವು ಸೋಪಾನಗಳು ಸಿಗುತ್ತವೆ. ಆ ಸೋಪಾನಗಳನ್ನು ಅಂದರೆ ಮೆಟ್ಟಿಲುಗಳನ್ನು ಹತ್ತಿ ಹೋದರೆ ದೇವಾಲಯ ವಿಶಾಲವಾದ ತೆರೆದ ಪ್ರಾಂಗಣವು ಸಿಗುತ್ತದೆ. ಈ ಪ್ರಾಂಗಣದಲ್ಲಿ ಈಗ ಮೇಲ್ಛಾವಣಿಯನ್ನು ಹಾಸಿ, ನಾಲ್ಕು ಕಡೆಗಳ ಗೋಡೆಗಳಿಂದ ಒಂದು ವಿಶಾಲವಾದ ಹಾಲ್ (ಕೊಠಡಿ) ಸಿದ್ಧವಾಗಿದ್ದು, ಹಳೆಯ ಕಸಗಳನ್ನೆಲ್ಲಾ ಶುದ್ಧೀಕರಿಸಿ ಹೊಸ ರೂಪವನ್ನು ಕೊಡಲಾಗಿದೆ.ಈ ಪ್ರಾಂಗಣದಲ್ಲಿ ಪ್ರಾಚೀನ ಕಾಲದ ಗಚ್ಚುಗಾರೆಯ ವೃಂದಾವನವಿದ್ದು, ಅಲ್ಲಿ ತುಳಸಿಯನ್ನು ನೆಡಲಾಗಿದೆ.ಈ ಪ್ರಾಂಗಣದಿಂದ ಒಳಗೆ ಶ್ರೀವೀರಾಂಜನೇಯಸ್ವಾಮಿಯ ದೇವಾಲಯವಿದ್ದು ಅದನ್ನು ಫಲಕದಲ್ಲಿ ಅಭಯಾಂಜನೇಯ ಎಂದು ಮೂಲವಲ್ಲದ ಬೇರೆಯ ಹೆಸರಿನಲ್ಲಿ ಕರೆಯಲಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ನವರಂಗದ ರಚನೆಗಳಿದ್ದು, ನವರಂಗದ ಮುಂದೆ, ಆಗಲೇ ವರ್ಣಿಸಿದ ಹಾಲ್ ನಂತಹ ಪ್ರಾಂಗಣವಿದೆ. ಗರ್ಭಗೃಹದಲ್ಲಿ ಸುಮಾರು 5 ಅಡಿ ಎತ್ತರದ ವೀರಆಂಜನೇಯಸ್ವಾಮಿಯ ಪ್ರಾಚೀನ ವಿಗ್ರಹವಿದೆ. ದೇವರ ಮೂರ್ತಿಯು ಪೀಠದ ಮೇಲೆ ಕೆತ್ತಲ್ಪಟ್ಟಿದ್ದು ಮೈಸೂರು ಅರಸರ ಶೈಲಿಯಲ್ಲಿ ಕಂಡರಿಸಲಾಗಿದೆ. ವಿಗ್ರಹದಲ್ಲಿಯೇ ಪ್ರಭಾವಳಿ ಇದ್ದು, ಪ್ರಭಾವಳಿಯ ಮಧ್ಯಭಾಗದಲ್ಲಿ ಶ್ರೀ ವೀರಾಂಜನೇಯ ಸ್ವಾಮಿಯನ್ನು ಪಡೆಮೂಡಿಸಲಾಗಿದ್ದು, ಬಲಗೈಯನ್ನು ಎತ್ತಿ ವೀರಮುದ್ರೆ (ಅಗಲಿಸಿ ಮೇಲೆ ಎತ್ತಿದ ಅಂಗೈ)ಯಲ್ಲಿದ್ದು, ಎಡಗೈ ಸೊಂಟದ ಮೇಲಿದ್ದು ಸೌಗಂಧಿಕಾ ಪುಷ್ಪವನ್ನು ಹಿಡಿದಿದ್ದಾನೆ. ಸೌಂಗಧಿಕಾ ಪುಷ್ಪದ ದಂಟಿನಲ್ಲಿ ಮೇಲ್ಭಾಗದಲ್ಲಿ ಮೂರು, ಕೆಳಭಾಗದಲ್ಲಿ ಒಂದು ತೆನೆಗಳಿರುವುದನ್ನು ಗಮನಿಸಬಹುದು. ಹನುಮಂತನು ಶಿಖಾಬದ್ಧನಾಗಿದ್ದು, ಉತ್ತರದ ಮುಖವನ್ನು ನೋಡುತ್ತಿದ್ದಾನೆ. (ಗರ್ಭಗೃಹದ ಮುಖ

ಪೂರ್ವಕ್ಕಿದೆ). ಆಂಜನೇಯನು ಶರೀರದಲ್ಲಿ ಅನೇಕ ಆಭರಣಗಳನ್ನು ಧರಿಸಿದ್ದು, ಅವುಗಳಲ್ಲಿ ಕಂಠೀ, ಹಾರ, ಪದಕಯುಕ್ತ ಮಾಲೆ, ಕೇಯೂರ, ಕಟಕ, ಕಾಂಚೀಗುಣ, ಮುಕ್ತಾದಾಮ, ವನಮಾಲಾ,ಅಂಗುಲೀಯಕ, ಪಾದಕಟಕ, ಪಾದಜಾಲಕ ಇವುಗಳಿಂದ ಅಲಂಕೃತನಾಗಿದ್ದಾನೆ. ಹನುಮಂತನು ಬಲ ವೈಶೇಷಿಕ ಸ್ಥಾನಕ ಮುದ್ರೆಯಲ್ಲಿ ನಿಂತಿದ್ದಾನೆ. ಬಾಲವು ಮೇಲ್ಭಾಗದಲ್ಲಿ ಎತ್ತಿಕೊಂಡಿದ್ದು, ಪ್ರಭಾವಳಿಗೆ ಹೊಂದಿಕೊಂಡಿದೆ. ಬಾಲದ ತುದಿಯಲ್ಲಿ ಸ್ವಲ್ಪ ಮುಂದೆ ಒಂದು ಗಂಟೆಯನ್ನು ಕೆತ್ತಲಾಗಿದೆ. ಹನುಮಂತನ ಮುಖದಲ್ಲಿ ಸ್ವಲ್ಪಕೋಪ ಮತ್ತು ಪ್ರಸನ್ನತೆ ಇದ್ದು, ಹಲ್ಲುಗಳನ್ನು ತೋರಿಸಲಾಗಿದೆ. ಕಿವಿಯಲ್ಲಿ ಸುಂದರವಾದ ಕುಂಡಲಗಳನ್ನು ಧರಿಸಿದ್ದಾನೆ. ಆಂಜನೇಯನ ಪುಷ್ಪಾಲಂಕೃತ ಪ್ರಭಾವಳಿಯ ಮೇಲ್ಭಾಗದ ಮಧ್ಯದಲ್ಲಿ ಕೀರ್ತಿಮುಖವಿದ್ದು, ಪಾದದ ಕೆಳಗಿನ ಪೀಠದ ಮಧ್ಯಭಾಗದಲ್ಲಿ ಸುಂದರ ಶಿಲ್ಪವೊಂದನ್ನು ಕಡೆಯಲಾಗಿದೆ. ಒಟ್ಟಿನಲ್ಲಿ ಈ ಮೂರ್ತಿಯು ಸಕಲ ಲಕ್ಷಣಗಳಿಂದ ಕೂಡಿದ್ದು ಮೈಸೂರು ಶಿಲ್ಪಶೈಲಿಯ ಸುಂದರ ಉದಾಹರಣೆಯಾಗಿದೆ.

ಈ ಆಂಜನೇಯನಿರುವ ಗರ್ಭಗೃಹದಿಂದ ಆಚೆಗೆ ಬಂದರೆ ಸುಖನಾಸಿಯಲ್ಲಿ ಒಂದು ಸುಂದರವಾದ ಲಕ್ಷ್ಮೀನಾರಾಯಣರ ಮೂರ್ತಿಯಿದ್ದು, ಅದೂ ಸಹ ಮೈಸೂರು ಶಿಲ್ಪಶೈಲಿಯ ಪ್ರತಿಮಾಲಕ್ಷಣಗಳನ್ನು ಹೊಂದಿದೆ.ಈ ದೇವಾಲಯದಿಂದ ಹೊರಬಂದರೆ, ಈ ದೇವಾಲಯದ ಬಲಭಾಗಕ್ಕೆ ಅಂದರೆ ದಕ್ಷಿಣ ದಿಕ್ಕಿನಲ್ಲಿ ಒಂದು ಗರ್ಭಗೃಹ ಸುಖನಾಸ ಮಾತ್ರ ಹೊಂದಿರುವ ಶಿವನ ದೇವಾಲಯವಿದೆ. ಗರ್ಭಗೃಹದಲ್ಲಿ ಪೀಠಯುಕ್ತವಾದ ಲಿಂಗವಿದ್ದು, ಲಿಂಗವನ್ನು ಒಂದು ಸುಂದರ ನಂದಿಯು ತಲೆಯನ್ನು ಸ್ವಲ್ಪಮಾತ್ರ ಬಗ್ಗಿಸಿ ನೋಡುತ್ತಿದೆ.ಈ ರೀತಿಯ ಶಿಲ್ಪವನ್ನು ಇಲ್ಲಿನ ಸ್ಥಳಾವಕಾಶಕ್ಕಾಗಿ ಹೀಗೆ ಮಾಡಿರುವುದು ಅಪರೂಪದ ಉದಾಹರಣೆಯಾಗಿದೆ. ಸಾಂಬಶಿವ ಎಂದು ಕರೆಯಲಾಗುವ ಶಿವನ ಎಡಭಾಗದಲ್ಲಿ ಅಭಯ, ವರದ ಮುದ್ರೆಯಿಂದ ಕೂಡಿದ ಚತುರ್ಭುಜ ಪಾರ್ವತಿ ದೇವಿಯವರ ವಿಗ್ರಹವಿದೆ. ಲಿಂಗದ ಬಲಭಾಗದಲ್ಲಿ ಅತ್ಯಂತ ಸುಂದರವಾದ ಮಹಿಷಮರ್ದನಿಯ ಒಂದು ಅಡಿ ಎತ್ತರದ ಶಿಲ್ಪವಿದೆ. ಈ ಮೂರ್ತಿಗಳು ಚಿಕ್ಕದಾಗಿದ್ದರೂ ಸಹ ಕಲಾತ್ಮಕತೆಯ ದೃಷ್ಟಿಯಿಂದ ಅತ್ಯಂತ ಸುಂದರವಾಗಿವೆ.

ಈ ವೀರಾಂಜನೇಯ ಮತ್ತು ಶಿವನ ದೇವಾಲಯಗಳು ಎರಡೂ ಸಹ ಮೈಸೂರು ಅರಸರ ಕಾಲದ ನಿರ್ಮಿತಿಯ ತಂತ್ರಜ್ಞಾನದಿಂದ ನಿರ್ಮಾಣಗೊಂಡಿದ್ದು, ಸುಣ್ಣದಗಾರೆ, ಇಟ್ಟಿಗೆ, ತಿಳಿ, ಮರ ಇತ್ಯಾದಿ ನೈಸರ್ಗಿಕ ವಸ್ತುಗಳನ್ನು ಬಳಸಿದ್ದಾರೆ. ಈ ಎರಡೂ ದೇವಾಲಯಗಳು ವಿಮಾನಗೋಪುರ ಅಥವಾ ಶಿಖರವನ್ನು ಹೊಂದಿದ್ದು ಶಿಖರದಲ್ಲಿ ಗಾರೆ ಶಿಲ್ಪಗಳು ಅತ್ಯಾಕರ್ಷವಾಗಿದ್ದರೂ ಈಗ ಭಿನ್ನವಾಗಿ ಉಳಿದು ಬಂದಿವೆ. ಇತ್ತೀಚೆಗೆ ಈ ಶಿಖರಗಳಿಗೆ ಬಣ್ಣವನ್ನು ಲೇಪಿಸಲಾಗಿದೆ. ಈ ಎರಡೂ ದೇವಾಲಯಗಳೂ ಸಹ ಪ್ರತ್ಯೇಕ ಪ್ರದಕ್ಷಿಣಾ ಪಥವನ್ನು ಹೊಂದಿವೆ. ಆಂಜನೇಯನ ದೇವಾಲಯದ ಪಕ್ಕದಲ್ಲಿ ಒಂದು ಕೊಠಡಿ ಇದ್ದು,ಪಾಕಶಾಲೆಯಾಗಿದ್ದಿರಬಹುದು.ಉಳಿದಂತೆಪ್ರಾಂಗಣದ ಹೊರಗೆ ಒಂದು ಕೊಠಡಿಯಿದ್ದು ಇದರ ಉಪಯೋಗ ತಿಳಿದುಬರುವುದಿಲ್ಲ.

ಈ ದೇವಾಲಯವು ಮೈಸೂರಿನ ಪ್ರಧಾನ ಆಕರ್ಷಣೆಯಾದ ಅಂಬಾವಿಲಾಸ ಅರಮನೆಯ ಮುಂಭಾಗದಲ್ಲಿ ಅನತಿ ದೂರದಲ್ಲೇ ಇದ್ದು, ಅರಮನೆಯ ಮುಂಭಾಗದ ರಸ್ತೆಯಿಂದ ಈ ದೇವಸ್ಥಾನಕ್ಕೆ ಇಳಿದು ಬರಲು ಕೆಲವು ಮೆಟ್ಟಿಲುಗಳಿವೆ.

ಇಲ್ಲಿ ಈ ಆಂಜನೇಯನ ದೇವಾಲಯ ಕಟ್ಟಿದವರು ಯಾರು? ಏತಕ್ಕಾಗಿ ಕಟ್ಟಿದರು? ಯಾವಾಗ ಕಟ್ಟಿದರು? ದೇವಾಲಯದ ಮುಂದೆ ಮೆಟ್ಟಿಲುಗಳು ಇರುವುದು ಯಾವದಕ್ಕಾಗಿ? ಈ ದೇವಾಲಯ ಕಟ್ಟಿದಾಗ ಯಾರು ಆಳುತ್ತಿದ್ದರು? ಈ ಆಂಜನೇಯ ದೇವಾಲಯದ ಹೆಸರೇನು? ಎಂಬ ಪ್ರಶ್ನೆಗಳಿಗೆ ಆಂಜನೇಯ ದೇವರ ಗರ್ಭಗೃಹದ ಮೇಲ್ಭಾಗದಲ್ಲಿ ಗೋಡೆಯಲ್ಲಿ ಅಳವಡಿಸಿರುವ ಮೈಸೂರು ಒಡೆಯರ ಕನ್ನಡದಲ್ಲಿ ಬರೆಯಲಾದ ಶಾಸನವೇ ಉತ್ತರವನ್ನು ಹೇಳುತ್ತದೆ. ಈ ಶಾಸನದ ಮೂಲ ಪಾಠ ಹೀಗಿದೆ[2].

1. ಶ್ರೀ ಶುಭಮಸ್ತು
2. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ 1762ನೆ ಸಂದ ವರ್ತಮಾನವಾದ ಶಾರ್ವರಿ ನಾಮ
3. ಸಂವತ್ಸರದ ವೈಶಾಖ ಶು 10 ಸೊಮವಾರದಲ್ಲು ಶ್ರೀಮಾಂನ್ ಮಹೀಶೂರ ಪುರವರಾಧೀಶ್ವರಕ್ರಿಷ್ಣ

[2]ಈ ಶಾಸನ ಅಪ್ರಕಟಿತ ಶಾಸನವಾಗಿದ್ದು, ಎಫಿಗ್ರಫಿಯಾಕರ್ನಾಟಿಕದಲ್ಲಿ ಸಂಪುಟ ನಾಲ್ಕರಲ್ಲಿ ಪರಿಶೀಲಿಸಲಾಗಿದ್ದುಅಲ್ಲಿ ಪ್ರಕಟವಾಗಿಲ್ಲ.

4. ರಾಜವಡೆಯರವರೂರತ್ನಸಿಂಹಾನಾರೂಢರಾಗಿ ಪೃಥ್ವಿಸಾಂಬ್ರಾಜ್ಯಂಗೈಯುತ್ತಿರುವಲ್ಲೂ ಸ್ವರ(ರ್ಣ?)
5. ಶುದವೀಣೆ ವಿದ್ವಾಂಸ ಕಚೇರಿ ಬಕಷಿ ವೆಂಕಟಸುಬ್ಬೈಯನವರ ಧರ್ಮಪತ್ನಿಯಾದ ವೆಂಕಮ್ಮನೂತಂನ ಭರ್ತ
6. ೦ಗೆತನಿಗೆ ಸಹ ಶಾಸ್ವತ ವಿಷ್ಣುಲೊಕ ಪ್ರಾಪ್ತ್ಯರ್ಥವಾಗಿ ಮಾಡಿಸಿದ ಸೊಪಾನ ಸಂಧ್ಯಾಮಂಟಪ ಶ್ರೀಆಂಜನೇ
7. ಯ ಪ್ರತಿಷ್ಠಾಯಿದಕ್ಕೆ ಬಲಭಾಗದಲ್ಲಿ ದೇವಸ್ಥಾನ ಸಿವ ಪ್ರತಿಷ್ಠೆ ಮುಂತಾದ ಸೆವಾಧರ್ಮಾ॥ ಕಾಮಗಾರಿ
8. ಮಾಡಿಸಿದ್ದು ಗುರುರಾಯಾ ॥ಶ್ರೀವೀರ ಆಂಜನೇಯ ಪ್ರಸಿದ[3] ॥

ಮೇಲಿನ ಶಾಸನವು ಒಡೆಯರ್ ಕಾಲದ ಕನ್ನಡದಲ್ಲಿದ್ದು ಮೇಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ.ಈ ಆಂಜನೇಯ ಸ್ವಾಮಿಯನ್ನು ಶಾಲಿವಾಹನ ಶಕ 1762ರ ವೈಶಾಖ ಮಾಸದ ಶುಕ್ಲಪಕ್ಷದ 10ನೇ ತಿಥಿ ಸೋಮವಾರದಂದು ಪ್ರತಿಷ್ಠಾಪಿಸಲಾಗಿದೆ. ಇದು ಭಾರತೀಯ ಎಫಿಮರಿಸ್ ಅನ್ವಯ ಮೇ ತಿಂಗಳ 11 ನೇ ತಾರೀಖು 1840 ಕ್ಕೆ ಸರಿ ಹೊಂದುತ್ತದೆ[4]. ಈ ಶಾಸನದ ಪ್ರಕಾರ ಅರಮನೆಯಲ್ಲಿ ಕಚೇರಿ ಭಕ್ಷಿಯವರಾಗಿದ್ದ ವೀಣೆ ವೆಂಕಟಸುಬ್ಬಯ್ಯನವರ ಪತ್ನಿಯಾದ ವೆಂಕಮ್ಮ ತನ್ನ ಗಂಡನಿಗೆ ಮತ್ತುತನಗೆ ಶಾಶ್ವತ ವಿಷ್ಣುಲೋಕಪ್ರಾಪ್ತಿಯಾಗಲೆಂದು ಈ ಆಂಜನೇಯ ದೇವಾಲಯ, ಮೆಟ್ಟಿಲು ಮತ್ತು ಸಂಧ್ಯಾ ಮಂಟಪ (ದೇವತಾಪೂಜೆ,ಸಂಧ್ಯಾವಂದನೆ ಇತ್ಯಾದಿಗಳಿಗಾಗಿ) ಮತ್ತು ಶಿವನ ದೇವಾಲಯವನ್ನು ಕಟ್ಟಿಸಿ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಈ ವೀಣೆ ವೆಂಕಟಸುಬ್ಬಯ್ಯನವರು (ಸಾ.ಶ. 1750 – 1838) ಮೂಲತಃ ತಮಿಳುನಾಡಿನ ತಂಜಾವೂರು ಜಿಲ್ಲೆಯ ಕಪಿಸ್ಥಲಂನವರು. ಇವರು ತಂಜಾವೂರಿನ ಶ್ರೀ ಶರಭೋಜ ಮಹಾರಾಜರಆಸ್ಥಾನ ವಿದ್ವಾಂಸರಾಗಿದ್ದ ಹಾಗೂ ಪ್ರಸಿದ್ಧ ವೈಣಿಕರಾಗಿದ್ದವೀಣೆಕುಪ್ಪಣ್ಣನವರ

[3]ಈ ಶಾಸನವನ್ನುಯಥಾವತ್ತಾಗಿ ನೀಡಲಾಗಿದೆ.ಆದ್ದರಿಂದಅದರಲ್ಲಿಯೇ ಕೆಲವು ಕನ್ನಡಕಾಗುಣಿತ ದೋಷಗಳಿವೆ. ಹಾಗೂ ಕೆಲವು ಕಡೆ ಬಣ್ಣಅಧಿಕವಾಗಿದ್ದು ಅಕ್ಷರಗಳು ಸರಿಯಾಗಿಕಾಣುತ್ತಿಲ್ಲ. ಆದರೂಯಥಾವತ್ತಾಗಿ ನೀಡಲು ಪ್ರಯ್ನತಿಸಿದೆ.ಸಂಖ್ಯೆಗಳು ಶಾಸನದಲ್ಲಿಇಲ್ಲ. ಅವು ಆಯಾ ಸಾಲುಗಳನ್ನು ಪ್ರತಿನಿಧಿಸುತ್ತವೆ.

[4]An Indian Ephemeris A.D. 1800 to A.D. 2000 by L.D. Swamikannu Pillai – 1994, Asian Educational Services, New Delhi

ಮಕ್ಕಳು.ಇವರು ದಿವಾನ್ ಪೂರ್ಣಯ್ಯ ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದು ಮೈಸೂರಿನ ಅರಸರಾದ ಶ್ರೀಮುಮ್ಮಡಿ ಕೃಷ್ಣರಾಜಒಡೆಯರ್ ಅವರಿಗೆ ಸಂಗೀತ ಶಿಕ್ಷಕರಾಗಿದ್ದರು. ಮೈಸೂರು ರಾಜ್ಯದ ಪ್ರಮುಖ ಸಂಗೀತ ವಿದ್ವಾಂಸರಾಗಿ ಗುರುತಿಸಿಕೊಂಡರು. ಗುರುಪಾದಪೂಜೆಯ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರ್ ಮಹಾರಾಜರು, ಇವರಿಗೆ ಮುತ್ತಿನ ಕುಚ್ಚಿನೊಂದಿಗಿದ್ದ ಸುವರ್ಣವೀಣೆಯನ್ನುಕೊಟ್ಟು ಗೌರವಿಸಿದ್ದರು. ಅದೂ ಅಲ್ಲದೇ ವೀಣೆ ವೆಂಕಟಸುಬ್ಬಯ್ಯನವರು ರಾಜಾಸ್ಥಾನದಲ್ಲಿ ವೀಣೆ ಭಕ್ಷಿಯವರೂ ಆಗಿದ್ದರು[5]. ಇದನ್ನು ಮೇಲಿನ ಶಾಸನದಲ್ಲಿ ಕೂಡ ಉಲ್ಲೇಖಿಸಲಾಗಿದೆ. ಇವರು ಅನೇಕ ಕೀರ್ತನೆಗಳನ್ನು ರಚಿಸಿದ್ದು ಸಪ್ತತಾಲೇಶ್ವರ ಎಂಬ ಕೃತಿಯನ್ನು ರೀತಿ ಗೌಳರಾಗದಲ್ಲಿ ಅಳವಡಿಸಿದ್ದು ಇದು ಸುಳಾದಿಯಾಗಿರುವುದರಿಂದ ಎಲ್ಲ ಏಳು ತಾಳಗಳನ್ನೂ ಒಳಗೊಂಡಿದೆ.ಇವರ ಸಹೋದರರಾಗಿದ್ದ ಅನಂತಸುಬ್ಬಯ್ಯ ಸಹ ವೈಣಿಕರು ಮತ್ತು ದೊಡ್ಡ ವಿದ್ವಾಂಸರಾಗಿದ್ದರು[6].

ಈ ಎಲ್ಲ ವಿಷಯಗಳೂ ಪೂರಕವಾಗಿ ಹೊಂದುವುದರಿಂದ ಈ ಶಾಸನದಲ್ಲಿ ಉಲ್ಲೇಖಿತರಾಗಿರುವುದು ಶ್ರೀವೀಣಾ ವೆಂಕಟಸುಬ್ಬಯ್ಯನವರೆ ಎಂದು ತೀರ್ಮಾನಿಸಬಹುದು. ಅಲ್ಲದೇ ಈ ಶಾಸನ ಹೊರಡಿಸುವ ಸಮಯದಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರ್ (ಸಾ.ಶ. 30ಜೂನ್ 1799 ರಿಂದ 27 ಮಾರ್ಚ್1868 )ಅವರು ಆಳುತ್ತಿದ್ದರೆಂದು ತಿಳಿಸಿರುವುದರಿಂದ ಉಪರೋಕ್ತ ವೆಂಕಟಸುಬ್ಬಯ್ಯನವರ ಈ ಕಾಲಘಟ್ಟವೂ ಸಹ ಸರಿಯಾಗಿ ಅವರಿಗೆ ಹೊಂದಿಕೆಯಾಗುತ್ತದೆ.

ಇನ್ನು ಈ ಸಂಧ್ಯಾ ಮಂಟಪ ಮತ್ತು ಸೋಪಾನಗಳು ಇರುವುದು ಯಾವುದಕ್ಕಾಗಿ ಎಂಬ ಪ್ರಶ್ನೆ ಈಗ ಈ ದೇವಸ್ಥಾನವನ್ನು ನೋಡಿದವರಿಗೆ ಉಂಟಾಗುತ್ತದೆ. ಈಗ ಇದು ವಸ್ತುಪ್ರದರ್ಶನದ ನೆಲದಿಂದ ಎತ್ತರದಲ್ಲಿದ್ದು ಒಂದು ಚಿಕ್ಕ ಬೆಟ್ಟದಂತೆ ಕಾಣುತ್ತದೆ. ಆದ್ದರಿಂದ ಇದು ಎತ್ತರದ ಪ್ರದೇಶದಲ್ಲಿದೆ. ಅದಕ್ಕಾಗಿ ಮೆಟ್ಟಿಲುಕಟ್ಟಿರಬಹುದು ಎಂಬ ಭ್ರಮೆ

[5]ಕರ್ಣಾಟಕಸಂಗೀತ ಪಾರಿಭಾಷಿಕ ಶಬ್ದಕೋಶ – ಸಂಪುಟ– 2, ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ– 1986, ಪುಟ– 400–401

[6]ಮೈಸೂರುಜಿಲ್ಲೆಯಇತಿಹಾಸ ಮತ್ತು ಪುರಾತತ್ವ, ಸಂ –ಡಾ. ಆರ್.ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– 2010 – ಪುಟ 300 – 301

ಬರುತ್ತದೆ.ಆದರೆ 1840 ರಲ್ಲಿಇದು ನೀರಿಗಾಗಿ ಇಳಿಯಲು ಮಾಡಿರುವ ವ್ಯವಸ್ಥೆ ಎಂದರೆ ಆಶ್ಚರ್ಯವಾಗಬಹುದು.ಹಿಂದೆ ಇಲ್ಲಿ ದೊಡ್ಡದೇವರಾಜ ಸಮುದ್ರ ಎಂಬ ಕೆರೆ ಇದ್ದು, ಆ ಕೆರೆ ಇಂದು ದೊಡ್ಡಕೆರೆ ಮೈದಾನ ಎಂಬ ಪ್ರದೇಶದಲ್ಲಿತ್ತು. ಇದನ್ನು ಮೈಸೂರಿನ ಅರಸರಾಗಿದ್ದ ದೊಡ್ಡದೇವರಾಜ ಒಡೆಯರ್ (ಸಾ.ಶ.1659 – 1673) ಅವರು ಕಟ್ಟಿಸಿದ್ದರು.ಭಾರತೀಯ ವಾಸ್ತುಗ್ರಂಥಗಳಿಗೆ ಅನುಗುಣವಾಗಿ ಈ ಕೆರೆಯನ್ನು ಅರಮನೆಯ ಮುಂದೆ ಪೂರ್ವಭಾಗಕ್ಕೆ ಕಟ್ಟಿಸಲಾಗಿತ್ತು. ಆದರೆ ಮುಂದಿನ ಕಾಲಮಾನಗಳಲ್ಲಿ ಈ ಕೆರೆಯನ್ನು ಮುಚ್ಚಲಾಯಿತು.ಈ ಪ್ರದೇಶದಲ್ಲಿಯೇ ಈ ವಸ್ತುಪ್ರದರ್ಶನ ಪ್ರಾಧಿಕಾರ ನಿರ್ಮಾಣವಾಗಿದೆ.

ಆದ್ದರಿಂದ 1840 ರಲ್ಲಿ ಶ್ರೀ ವೆಂಕಟಸುಬ್ಬಯ್ಯನವರ ಧರ್ಮಪತ್ನಿಯಾದ ವೆಂಕಮ್ಮ ಇಲ್ಲಿ ಇಳಿದು ಸ್ನಾನಕ್ಕೆ, ಸಂಧ್ಯಾವಂದನೆಗೆ ಅನುಕೂಲವಾಗಲೆಂದು ಸೋಪಾನಯುಕ್ತವಾದ ಮಂಟಪ ಕಟ್ಟಿಸಿದ್ದರು. ಅದೂ ಅಲ್ಲದೇ ಹಿರಿಯರು ಹೇಳುವಂತೆ ದಸರಾ ಕಾಲದಲ್ಲಿ ಇಲ್ಲಿ ಜನ ಬಂದು ಮುಡಿ ಮಾಡಿಸಿಕೊಂಡು, ಸ್ನಾನ ಮಾಡಿ, ಹನುಮನ ದರ್ಶನ ಪಡೆದು ನವರಾತ್ರಿ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಇನ್ನು ಈ ಆಂಜನೇಯನ ಮೂರ್ತಿ ಲಕ್ಷಣದ ಪ್ರಕಾರಯಾವ ಹೆಸರಿನ ಹನುಮನ ದೇವಾಲಯ ಎಂಬ ಪ್ರಶ್ನೆ ಉಂಟಾಗುತ್ತದೆ. ಈ ಶಾಸನದ ಕೊನೆಯ ಸಾಲಿನಲ್ಲಿ ಶ್ರೀ ವೀರ ಆಂಜನೇಯನು ನಮಗೆ ಪ್ರಸನ್ನನಾಗಲಿ ಎಂದು ಹೇಳಿರುವುದರಿಂದ ವೀರ ಮುದ್ರೆಯಲ್ಲಿ ಇರುವುದರಿಂದ ಈ ದೇವಾಲಯದ ಹೆಸರು ವೀರಆಂಜನೇಯ ಸ್ವಾಮಿದೇವಾಲಯ. ಆದರೆ ಈಗ ಇದನ್ನು ಅಭಯ ಆಂಜನೇಯ ಎಂದು ಬೇರೆ ರೀತಿಯಲ್ಲಿ ಗುರುತಿಸಲಾಗುತ್ತಿದೆ.

ಆದ್ದರಿಂದ ಈ ದೇವಾಲಯವನ್ನು ನಾವು ಶಾಸನದಲ್ಲಿದ್ದಂತೆ ಶ್ರೀ ವೀರಆಂಜನೇಯ ಎಂದು ಕರೆಯುವುದು ಸೂಕ್ತವಾಗಿದೆ. ಯಾಕೆಂದರೆ ಪರಂಪರೆಯನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗುತ್ತದೆ. ಇನ್ನುಇದು ಪರಂಪರೆಗೆ ಸೇರುವುದರಿಂದ ಪರಂಪರೆಯ ಕಾನೂನಿಗೆ ಅನುಸಾರವಾಗಿ ಈ ದೇವಾಲಯದ ಜೀರ್ಣೋದ್ಧಾರ ಮಾಡಬೇಕೆಂಬುದು ಇತಿಹಾಸಕಾರನಾಗಿ ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ಈಗಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಮಿರ್ಲೆ ಶ್ರೀನಿವಾಸಗೌಡರು, ಇಲ್ಲಿನ ಕಾರ್ಯನಿರ್ವಾಹಣಾಧಿಕಾರಿ

ಶ್ರೀ.ಕೆ.ರುದ್ರೇಶ್ ಮತ್ತು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರಾದ (ಪ್ರ)ಡಾ. ಸಿ.ಎನ್. ಮಂಜುಳಾ ಅವರಿಗೆ ದೇವಾಲಯದ ಪರಂಪರೆ, ಇತಿಹಾಸ, ಧಾರ್ಮಿಕತೆಗೆ ಅನುಗುಣವಾಗಿ ಜೀರ್ಣೋದ್ಧಾರ ಮಾಡಲು ಕೋರಲಾಗಿದ್ದು, ಅದರಂತೆ ನಡೆಯಲಿ ಎಂಬ ಆಶಯ ನಮ್ಮದಾಗಿದೆ.

**ಛಾಯಾಚಿತ್ರಗಳು**



ಮೂಲ ಶಾಸನ



ವೀರಾಂಜನೇಯ ವಿಗ್ರಹ



**ಶ್ರೀವೀರಾಂಜನೇಯಸ್ವಾಮಿಯ ದೇವಾಲಯ ಪರಿಸರ**

**ಹೆಚ್ಚಿನ ಓದಿಗಾಗಿ ಪರಾಮರ್ಶನ ಗ್ರಂಥಗಳು**


1. An Indian Ephemeris A.D. 1800 to A.D. 2000 by L.D. Swamikannu Pillai – 1994, Asian Educational Services, New Delhi
2. ಮೈಸೂರು ದರ್ಶನ – ಸಂಪುಟ– 3, ಪ್ರಸಾರಾಂಗ, ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು– 2012
3. ಎಪಿಗ್ರಫಿಯಾಕರ್ನಾಟಿಕ – ಸಂಪುಟ– 4, ಕನ್ನಡಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ – 1975
4. ಆಚಾರ್ಯ ಶ್ರೀರಾಮಾನುಜರು–ಡಾ.ಶಲ್ವಪ್ಪಿಳ್ಳೈ ಅಯ್ಯಂಗಾರ್, ಮೇಲುಕೋಟೆ– 2017
5. ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂ –ಡಾ. ಆರ್. ಗೋಪಾಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– 2010
6. ಕರ್ಣಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ – ಸಂಪುಟ– 2, ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ– 1986